ಓ.ಎಸ್‌ಃ 571/2016

ಡಿ.ಡಬ್ಲ್ಯೂಃ 01

**<u>ದಿನಾಂಕಃ 16.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ವಾದಿ ಪರ ಶ್ರೀ ಬಿ.ಆರ್.ಎ. ವಕೀಲರಿಂದಃ</u>**

1. VPC No.76 ನನಗೆ ಪಂಚಾಯಿತಿಯಿಂದ ಮಂಜೂರು ಆಗಿರುತ್ತದೆ. ಯಾವಾಗ ಮಂಜೂರು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಕ್ಕು ಪತ್ರದ ಮೂಲಕ ನನಗೆ VPC No.76 ಮಂಜೂರು ಆಗಿರುತ್ತದೆ. ಸದರಿ ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಸದರಿ ಆಸ್ತಿ ನನ್ನದು ಅಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿ ನಂಬರ 563 ಎಂದರೆ ನನಗೆ ಗೊತ್ತಿಲ್ಲ. ವಾದಿ ಹಾಜರಪಡಿಸಿದ ದಾಖಲಾತಿಯನ್ನು ನಾನು ನೋಡಿರುವುದಿಲ್ಲ.

2. ವಾದಿಗೆ ಆಸ್ತಿ ನಂ.563 ನು ಸರ್ವೆ ನಂ.46 ರಲ್ಲಿ ದಿಃ25.10.1990 ರಲ್ಲಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸದರಿ ಹಕ್ಕು ಪತ್ರವನ್ನು ಹಾಜರಪಡಿಸಿರುತ್ತಾನೆ ಎಂದರೆ ಸರಿ. ವಾದಿಯು ಆಸ್ತಿ ನಂ.563 ರಲ್ಲಿ ಸ್ವಾಧಿನದಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಾನು ಆಸ್ತಿ ನಂ.76 ರಲ್ಲಿ ಸ್ವಾಧಿನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ವಾದಿಗೆ ಹಕ್ಕು ಪತ್ರ ನೀಡಿದ ಮೇರೆಗೆ ಪಂಚಾಯಿತಿಯಲ್ಲಿ ಠರಾವು ಪಾಸಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ವಾದಿಯ ಆಸ್ತಿಯ ಚಕಬಂದಿ ಪೂರ್ವಕ್ಕೆ ಬಸಲಿಂಗಪ್ಪ ರಾಯಣ್ಣ ಆಸ್ತಿ, ಪಶ್ಚಿಮಕ್ಕೆ ಅಮೀರ ಬಾಗವಾನ ಆಸ್ತಿ, ಉತ್ತರಕ್ಕೆ ಕೆರೆಯ ದಾರಿ, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿಯವರು ವಾದಿಗೆ ಮನೆ ಕಟ್ಟಲು ಪರವಾಣಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಆಸ್ತಿ ನಂ.563 ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಚಕಬಂದಿ ವಾದಿಯ ಆಸ್ತಿಯ ನಂ.563 ಕ್ಕೆ ಇರುತ್ತದೆ ಎಂದರೆ ಸರಿಯಲ್ಲ.

4. ಆಸ್ತಿ ನಂ.563 ಕ್ಕೂ ಮತ್ತು ಆಸ್ತಿ ನಂ.76 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಆಸ್ತಿ ನಂ.76 ಇರುತ್ತದೆ, ಆಸ್ತಿ ನಂ.563 ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ಆಸ್ತಿ ಚಕಬಂದಿ ನಮೂದಿಸಿರುವುದು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಪೂರ್ವಕ್ಕೆ ರಾಯಪ್ಪ ಜಮಖಂಡಿ, ಪಶ್ಚಿಮಕ್ಕೆ ಆಸನಬಿ ಪಠಾಣ,

ಉತ್ತರಕ್ಕೆ ಹಳ್ಳ, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ನಮೂದಿಸಿರುತ್ತದೆ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದ ಚಕಬಂದಿ ಆಸ್ತಿ ಮಾಲಿಕಳು ಎಂದು ತೋರಿಸಲು ಯಾವುದೆ ದಾಖಲಾತಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿ ನಂ.563 ಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಆಸ್ತಿ ನಂ.76 ಕ್ಕೆ ಮಾತ್ರ ಸಂಬಂಧಪಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

5. ಸರ್ವೆ ನಂ.76 ನಿವೇಶನ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಊರಲ್ಲಿ ಇಲ್ಲದಿದ್ದಾಗ ನಾನು ದಾವಾ ಆಸ್ತಿಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯಲ್ಲಿ ನಾನು ಮನೆ ಕಟ್ಟುತ್ತೀರವಾಗ ವಾದಿಯು ನನಗೆ ವಿನಂತಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟತ್ತೀರುವಾಗ ವಾದಿಯು ವಿನಂತಿಸಿದರು ಸಹ ಕೇಳದಿದ್ದ ಕಾರಣ ದಾವೆ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಪ್ರಮಾ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

6. ಪಂಚಾಯಿತಿಯಿಂದ ಸುಳ್ಳು ದಾಖಲಾತಿಗಳನ್ನು ಪಡೆದುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ದಾಖಲಾತಿಗಳು ಸೃಷ್ಟಿಸಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**